(ಸಾಕ್ಷಿಯನ್ನು ದಿನಾಂಕಃ 12.11.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.)

**ಪಾಟೀ ಸವಾಲುಃ ವಾದಿ ಪರ ವಕೀಲರುಃ ಶ್ರೀ ಬಿ ಎ ಜಿ ರವರಿಂದ**

ವಾದಿಯ ತಾಯಿಯ ಹೆಸರು ಸಿದ್ದಮ್ಮ, ತಂದೆಯ ಹೆಸರು ತಮ್ಮೇಗೌಡ ಆಗಿರುತ್ತದೆ. 4 ನೇ ಪ್ರತಿವಾದಿಯ ತಾಯಿಯ ಹೆಸರು ಮಾಯಮ್ಮ ಆಗಿರುತ್ತದೆ. 4 ನೇ ಪ್ರತಿವಾದಿ ಸಾದೊಳಿನಲ್ಲಿ ವಾಸವಾಗಿರುತ್ತಾರೆಂದರೆ ಸರಿ. 4 ನೇ ಪ್ರತಿವಾದಿಯ ತಮ್ಮ ಶೇಖರ ಆಗಿದ್ದು ಅವರಿಗೆ 4 ನೇ ಪ್ರತಿವಾದಿಯ ಮಗಳನ್ನೇ ಮದುವೆ ಮಾಡಿಕೊಟ್ಟಿರುತ್ತಾರೆ. ದಾವಾ ಸ್ವತ್ತು ಮೂಲತಃ ಹೊನ್ನೇಗೌಡರವರಿಗೆ ಸೇರಿದ್ದಾಗಿತ್ತು ಎಂದರೆ ಸರಿ. 4 ನೇ ಪ್ರತಿವಾದಿ ಹೊನ್ನಲಗೇಗೌಡರವರ ವಾರಸುದಾರರಾಗಿರುತ್ತಾರೆಂದರೆ ಸರಿ. 4 ನೇ ಪ್ರತಿವಾದಿಯವರಿಗೆ ಆಗಿದ್ದ ದಾನಪತ್ರಕ್ಕೆ ನಾನು ಸಾಕ್ಷಿದಾರನಾಗಿರುವುದಿಲ್ಲ. 4 ನೇ ಪ್ರತಿವಾದಿಯ ಗಂಡನನ್ನು ಕೋಳೀ ಸಿದ್ದೇಗೌಡ ಎಂದು ಕರೆಯುತ್ತಾರೆಂದರೆ ಸರಿಯಲ್ಲ. ಸಿದ್ದೇಗೌಡ ಎಂದು ಮಾತ್ರ ಕರೆಯುತ್ತಾರೆ. ವಾದಿಗೆ ದಾವಾ ಸ್ವತ್ತು ಅವರ ತಾಯಿಯ ಕಡೆಯಿಂದ ಬಂದ ಸ್ವತ್ತಾಗಿರುತ್ತದೆಯೆಂದರೆ ಸರಿಯಲ್ಲ. ವಾದಿಗೆ ಸೇರಿದ ಜಮೀನನ್ನು 4 ನೇ ಪ್ರತಿವಾದಿ ವಾದಿಯ ಹೆಸರನ್ನು ದುರುಪಯೋಗಪಡಿಸಿಕೊಂಡು ಶೇಖರನಿಗೆ ದಾವಾ ಸ್ವತ್ತಿನ ದಾನಪತ್ರವನ್ನು ಬರೆದಿರುತ್ತಾರೆಂದರೆ ಸರಿಯಲ್ಲ. 4 ನೇ ಪ್ರತಿವಾದಿ ನನಗೆ ಹತ್ತಿರದ ಸಂಬಂಧಿಯಾದ ಕಾರಣ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ಇಬ್ಬರೂ ಸಹ ನನಗೆ ಚಿಕ್ಕಪ್ಪನ ಮಕ್ಕಳು ಎಂದು ನುಡಿಯುತ್ತಾರೆ. ದಾವಾ ಸ್ವತ್ತು 4 ನೇ ಪ್ರತಿವಾದಿಗೆ ಸೇರಿಲ್ಲದೇ ಇರುವ ವಿಚಾರ ನನಗೆ ಗೊತ್ತಿದ್ದರೂ ಸಹ ದಾವಾ ಸ್ವತ್ತು 4 ನೇ ಪ್ರತಿವಾದಿಗೆ ಸೇರಿದ್ದಾಗಿರುತ್ತದೆಯೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ )

ಓ ಹೇ ಕೇ ಸ ಇ ಓ.

1 ನೇ ಅಪರ ಸಿವಿಲ್ ನ್ಯಾಯಾಧೀಶರು

ಸಾಕ್ಷಿ ಸಹಿ ಮತ್ತು ಜೆ ಎಂ ಎಫ್ ಸಿ ಮದ್ದೂರು.